ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ ನ್ಯಾಯಾಲಯ

**ಸಿ.ಸಿ. ನಂ. 817/2023**

ಸಿ ಡಬ್ಲ್ಯು 13, ಪಿಡಬ್ಲ್ಯು9 .

ಸಾಕ್ಷಿದಾರರ ಹೆಸರು :- ವಿನಾಯಕ ನಾಯಕ

ವಯಸ್ಸು :- 45 ವರ್ಷಗಳು

ಉದ್ಯೋಗ :- ಆರ್ ಟಿ ಓ

ವಾಸಸ್ಥಳ :- ಕೊಪ್ಪಳ

ದಿನಾಂಕಃ20-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1-03-2019 ರಿಂದ 31-03-2019 ರವರೆಗೆ ನಾನು ಹಾವೇರಿ ಆರ್ ಟಿ ಓ ಕಚೇರಿಯಲ್ಲಿ ಇನ್ಸಪೆಕ್ಟರ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ11-03-2019 ರಂದು ನಾನು ಚಾಸಾ-15 ರವರಿಂದ ಮನವಿ ಸ್ವಿಕರಿಸಿ ಅದೇ ದಿನ ಸವಣೂರು ಪೋಲಿಸ ಠಾಣೆಯಲ್ಲಿ ಸಂಜೆ 5.00 ಗಂಟೆಗೆ ವಾಹನ ಸಂಖ್ಯೆ ಕೆ ಎ 31 ಎ 0132 ರ ತಾಂತ್ರಿಕ ಪರೀಕ್ಷೆಯನ್ನು ಮಾಡಿ ಅದೇ ದಿನ ವರದಿ ಸಲ್ಲಿಸಿರುತ್ತೆನೆ.

ಮುಂದಿನ ಗಾಜು ಒಡೆದಿರುತ್ತದೆ , Front show panel dented mark, Right side rear view mirror is dislocated, scratch mark on right side driver door, Right parts are in order. ವಾಹನದ ತಡೆಗಳು ಸುಸ್ಥಿತಿಯಲ್ಲಿ ಇದ್ದವು. ನನ್ನ ಅಬಿಪ್ರಾಯದಲ್ಲಿ ಈ ಅಪಘಾತವು ವಾಹನ ತಾಂತ್ರಿಕ ದೋಶದಿಂದ ಆಗಿರುವುದಿಲ್ಲ.

ಸಾಕ್ಷಿಯ ನೋಡಿ ಗುರುತಿಸಿದ ಎಮ್ ವಿ ರಿಪೋರ್ಟ ನಿಪಿ 18 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 18 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಜಿ ಟಿ ವಕೀಲರಿಂದ

ಅಪಘಾತ ಆದ ಎಷ್ಟು ದಿನಗಳ ನಂತರ ವಾಹನ ತಪಾಸಣೆ ಮಾಡಿದ್ದೇನೆ ಎಂದರೆ ಸಾಕ್ಷಿಯು ಅಪಘಾತ ಆದ ದಿನ ಗೊತ್ತಿಲ್ಲ. ನನಗೆ 11-03-2019 ರಂದು ಕೋರಿಕೆ ಪತ್ರವನ್ನು ನೀಡಿದ್ದಾರೆ. ಕೋರಿಕೆಯ ಪತ್ರದಲ್ಲಿ ವಾಹನ ಅಪಘಾತ ಆದ ದಿನ ಬರೆದಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಕೋರಿಕೆ ಪತ್ರವನ್ನು ಎಷ್ಟು ಗಂಟೆಗೆ ಪಡೆದುಕೊಂಡೆ ಎಂದರೆ ಗೊತ್ತಿಲ್ಲ . ಕೋರಿಕೆ ಪತ್ರವನ್ನು ಕಚೇರಿಯಲ್ಲಿ ಪಡೆದುಕೊಂಡಿದ್ದೆನೆ.ಹಾವೇರಿ ಕಚೇರಿಯನ್ನು ಎಷ್ಟು ಗಂಟೆಗೆ ಬಿಟ್ಟೆ ಎಂದು ಹೇಳಲು ಬರುವುದಿಲ್ಲ. ವಾಹನ ತಪಾಸಣೆಯನ್ನು 5 ಗಂಟೆ

ಮುಂಚಿತವಾಗಿ 10-15 ನಿಮಿಷ ಮಾಡಿದ್ದೇನೆ. ಸದರಿ ವಿಷಯ ನನ್ನ ವರದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ವಾಹನ ತಪಾಸಣೆ ಮಾಡಿಲ್ಲ , ಕಚೇರಿಯಲ್ಲಿ ಕುಳಿತು ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.